‘ಇವತ್ತು ರಾತ್ರಿ ನಾಟಕದವರಿಗೆ ಬಾಬಣ್ಣನ ಮನೆಯಲ್ಲಿ ಔತಣವಂತೆ. ಮೂವತ್ತು ಕೋಳಿ ಕೊಯ್ಸ್‌ತಾನಂತೆ. ನಾನ್‌ವೆಜ್ ಅಡಿಗೆ ಮಾಡೋರನ್ನು ಸಿರಾದಿಂದ ಕರೆಸಿದ್ದಾನಂತೆ...’ ಅಂತ ಸುದ್ದಿಯಾಯಿತು. ನಾಳೆ ಲೇಡಿ ಆರ್ಟಿಸ್ಟ್‌ಗಳನ್ನು ನಮ್ಮನೆಗೆ ಹೋಳಿಗೆ ಊಟಕ್ಕೆ ಕರಿತೀನಿ ಅಂತ ಸೀನ ಬೆಳಗ್ಗೆಯೇ ಪ್ರಾಕ್ಟೀಸು ಮನೆಗೆ ಹೋದ. ಬಾಬಣ್ಣನ ಸಂಬಳದಾಳು ಅವನನ್ನು ಗೇಟಿನಲ್ಲೇ ತಡೆದ. ಯಾರನ್ನೂ ಒಳಕ್ಕೆ ಬಿಡಬೇಡ ಅಂತ ಬಾಬಣ್ಣಾರ ಹುಕುಂ ಆಗಿದೆ ಅಂದ. ಸೀನನಿಗೆ ರೇಗಿ ಹೋಯ್ತು. ಕೂಗಾಡಲು ಶುರು ಮಾಡಿದ. ಒಳಗೆ ಪ್ರಾಕ್ಟೀಸು ಮಾಡಿಸುತ್ತಿದ್ದ ಮೇಷ್ಟ್ರು ಹೊರಕ್ಕೆ ಬಂದು ನೋಡಿದರು. ಅಷ್ಟರಲ್ಲಿ ಸೀನ ಕೈ ಬೀಸಿಕೊಂಡು ಮನೆ ಕಡೆಗೆ ಹೋಗುತ್ತಿದ್ದ. ಅವನು ಏನಾದರೂ ಕಿತಾಪತಿ ಮಾಡಬಹುದು ಅಂತ ಮೇಷ್ಟ್ರಿಗೆ ಅನ್ನಿಸಿತು. ರಿಹರ್ಸಲ್ ನೋಡಲು ಬರುವಂತೆ ಸೀನನ ಮನೆಗೆ ಹೋಗಿ ಕರೆದರು. ಅವನು ಬರಲಿಲ್ಲ.

ನಾಟಕದ ದಿನ ಹನ್ನೊಂದು ಗಂಟೆ ಹೊತ್ತಿಗೆ ಬಿದರಳ್ಳಿ ಸ್ಟೇಷನ್ನಿನ ಎಚ್ಸಿ ತಿಪ್ಪೇರುದ್ರಪ್ಪ ಪ್ರಾಕ್ಟೀಸು ಮನೆಗೆ ಬಂದ. ನಾಟಕ ಆಡೋಕೆ ಪರ್ಮಿಷನ್ ತಗಂಡಿದ್ದಾರೇನೊ ಕೇಳ್ಕಂಡ್ ಬಾ ಅಂತ ಎಸ್ಸೈ ಕಳಿಸಿದರು ಅಂದ. ರಿಹರ್ಸಲ್ ಗಡಿಬಿಡಿಯಲ್ಲಿ ಮೇಷ್ಟ್ರು ಪೊಲೀಸರ ಅನುಮತಿ ತಗೋಳದನ್ನು ಮರೆತಿದ್ದರು! ಮೊದ್ಲು ಸ್ಟೇಷನ್ನಿಗೆ ಬಂದು ಅರ್ಜಿ ಕೊಡಿ. ಕರೆಂಟು ತಗಳಕೆ ಕೆಪಿಟಿಸಿಯಲ್‌ನವರಿಗೆ ಅರ್ಜಿ ಕೊಡಬೇಕು. ಇವತ್ತೇ ನಾಟಕ ಅಂತೀರ... ಅರ್ಜಿ ಯಾವಾಗ ಕೊಡ್ತೀರ, ಪರ್ಮಿಷನ್ ಯಾವಾಗ ತರ್ತೀರ ಅಂತ ಎಚ್ಸಿ ಕೇಳಿದ. ಶನಿ ಮಹಾತ್ಮೆಯೇ ಆದರೂ ನಾವು ಕಾನೂನು ಫಾಲೊ ಮಾಡಬೇಕು ಅಂದ. ಆಮೇಲೆ ಬಸ್ಸಲ್ಲಿ ಬಂದೆ ದಾರಿ ಖರ್ಚಿಗೆ ಏನಾದರೂ ಕೊಡಿ ಅನ್ನುತ್ತ ತಲೆ ಕೆರೆದ.

ಮೇಷ್ಟ್ರು ಬಾಬಣ್ಣನ ಮನೆಗೆ ಓಡಿದರು. ಪೊಲೀಸರಿಂದ ಪರ್ಮಿಷನ್ ತಗಳದನ್ನೇ ಮರೆತಿದ್ದೆ ಅಂತ ಬಾಬಣ್ಣನ ಎದುರು ಗಾಬರಿಯಲ್ಲಿ ಹೇಳಿದರು. ಬಾಬಣ್ಣ ಫೋನ್ ಮಾಡಿ ಸೀನನನ್ನು ಮನೆಗೆ ಕರೆಸಿಕೊಂಡ. ಹತ್ತೇ ನಿಮಿಷದಲ್ಲಿ ಸೀನ ಬಿದರಳ್ಳಿ ಎಸ್ಸೈ ಸಾಹೇಬರಿಗೆ, ಕೆಪಿಟಿಸಿಎಲ್‌ನವರಿಗೆ ಅರ್ಜಿ ಬರೆದ.

‘ಸೀನಣ್ಣ, ಈ ಕೆಲ್ಸ ನಿನ್ನಿಂದ ಮಾತ್ರ ಸಾಧ್ಯ. ನೀನು ಬಿದರಳ್ಳಿಗೆ ಹೋಗಿ ಅರ್ಜಿ ಕೊಡು. ಕರೆಂಟಿನ ಅರ್ಜಿ ನಾನು ಕೊಡ್ತೀನಿ. ನಮ್ಮ ಕಾರು ತಗಂಡು ಹೋಗು. ನಿನ್ನ ಜತೆಗೆ ನಮ್ಮ ಚಂದ್ರನೂ ಬರ್ತಾನೆ. ಎಸ್ಸೈ ಸಾಹೇಬರಿಗೆ ನಾನು ಫೋನ್ ಮಾಡಿ ಹೇಳ್ತೀನಿ. ಪರ್ಮಿಷನ್ ಲೆಟರ್ ತಗಂಡೇ ಬರಬೇಕು’ ಅಂತ ಹೇಳಿ ಅವನ ಕೈಗೆ ಐದುಸಾವಿರ ಕೊಟ್ಟ.

‘ನಾಟಕಕ್ಕೆ ಪೊಲೀಸರಿಂದ ಲೈಸನ್ಸೇ ತಂಗಂಡಿಲ್ವಂತೆ... ಸ್ವಲ್ಪ ಹೊತ್ತಿನ ಮೊದಲು ಅರ್ಜಿ ಕೊಡಕೆ ಸೀನ ಬಿದರಳ್ಳಿಗೆ ಹೋದನಂತೆ. ಮೇಷ್ಟ್ರಿಗೆ ವ್ಯವಹಾರ ಜ್ಞಾನ ಇಲ್ಲ...’ ಅಂತ ಊರವರು ಬೇಸರ ಮಾಡಿಕೊಂಡರು. ಕಂಬದಿಂದ ಕರೆಂಟ್ ಎಳಕಳಕ್ಕೆ ಐದು ಸಾವಿರ ಡಿಪಾಜಿಟ್ಟು ಕಟ್ಟಿ. ಪೊಲೀಸರಿಂದ ಪರ್ಮಿಷನ್ ತಂದ ಮೇಲೆ ನಮ್ಮ ಲೈನ್‌ಮನ್ ಬಂದು ಕನೆಕ್ಷನ್ ಕೊಡ್ತಾನೆ ಅಂತ ಸೆಕ್ಷನ್ ಆಫೀಸರು ಬಾಬಣ್ಣನಿಗೆ ಹೇಳಿದ.

ಸೀನ ಬಿದರಳ್ಳಿ ಸ್ಟೇಷನ್ನಿಗೆ ಹೋದಾಗ ಎರಡು ಗಂಟೆಯಾಗಿತ್ತು. ಅಲ್ಲಿದ್ದ ಸೆಂಟ್ರಿ, ನಮ್ಮ ಸಾಹೇಬರು ರಜಾದಲ್ಲಿದ್ದಾರೆ. ಅವರು ಬರೋದು ಮುಂದಿನ ವಾರ. ಟೌನ್ ಸ್ಟೇಷನ್ನಿನ ಸಿಐ ಸಾಹೇಬರು ಇನ್‌ಚಾರ್ಜ್ ಇದ್ದಾರೆ. ನೀವು ಅವರಿಗೆ ಅರ್ಜಿ ಕೊಡಬೇಕು. ಅವರೇ ಪರ್ಮೀಷನ್ ಕೊಡ್ತಾರೆ. ಎಸ್ಸೈ ಸಾಹೇಬರು ಕೋಡಿಹಳ್ಳಿ ಹತ್ರ ಯಾವುದೊ ಬೇನಾಮಿ ಹೆಣ ಬಿದ್ದಿದೆ ಅಂತ ಹೋಗಿದ್ದಾರೆ. ಅವರು ಬರೋದು ತಡವಾಗುತ್ತೆ ಅಂದ.

ಸೀನ, ಟೌನ್ ಸ್ಟೇಷನ್ನಿನ ಸಿಐ ಸಾಹೇಬರಿಗೆ ಅರ್ಜಿ ಕೊಡಲು ಹೋದಾಗ ನಾಲ್ಕು ಗಂಟೆ ಆಗಿತ್ತು. ಸ್ಟೇಷನ್‌ನಲ್ಲಿದ್ದ ರೈಟರಿಗೆ ಅರ್ಜಿ ಕೊಟ್ಟ. ಯಾವ ನಾಟಕ? ಯಾರು ಬರೆದದ್ದು? ಪ್ರಿಂಟಾಗಿದೆಯಾ? ಆಗಿದ್ದರೆ ಅದರ ಪ್ರತಿ ಎಲ್ಲಿದೆ? ಪ್ರಿಂಟ್ ಆಗಿಲ್ಲದಿದ್ದರೆ ಕೈಬರಹದ ಸ್ಕ್ರಿಪ್ಟ್ ಎಲ್ಲಿದೆ? ಅದರ ನಕಲನ್ನು ಅರ್ಜಿ ಜತೆ ಕೊಡಬೇಕು ಅಂತ ನಿವೃತ್ತಿ ಅಂಚಿನಲ್ಲಿದ್ದ ರೈಟರು ತಕರಾರು ತೆಗೆದ.

ಮುಂದಿನ ವಾರ ಸಿಎಂ ಸಾಹೇಬರು ಬರೋ ಪೋಗ್ರಾಮಿದೆ. ನಮ್ಮ ಸಾಹೇಬರು ಅವರ ಬಂದೋಬಸ್ತ್ ವ್ಯವಸ್ಥೆ ನೋಡೋಕೆ ಹೋಗಿದ್ದಾರೆ. ಎಷ್ಟೊತ್ತಿಗೆ ಬರ್ತಾರೊ ಗೊತ್ತಿಲ್ಲ. ಇವತ್ತೇ